

ಎಚ್. ಸಿ. ಭವ್ಯ ನವೀನ್
ಕಲೆ: ರೂಪಶ್ರೀ ಕಲ್ಲಿಗನೂರು

# ಚರಿತ್ರೆ

ಚರಿತ್ರೆ
ಅಂದರೆ ಏನು?
ಹಾಡು ಕಟ್ಟುವುದಕ್ಕೆ
ಹೆಜ್ಜೆ ಕುಣಿಸಲಿಕ್ಕೆ
ನಗುವುದಕ್ಕೆ
ಬಿಕ್ಕುಗಳ ನುಂಗುವುದಕ್ಕೆ
ಮುಖ್ಯವಾಗಿ
ಹಸಿ ಹಸಿಯಾಗಿ ಪ್ರೀತಿಸಲಿಕ್ಕೂ
ಚರಿತ್ರೆಯಲ್ಲಿ ಪಾಠಗಳಿವೆಯಾ?



ಯುದ್ಧಗಳೇ ಚರಿತ್ರೆಗಳಾಗಿ
ಸಾಮ್ರಾಜ್ಯಗಳ ತುಂಬಾ
ಸಮಾಧಿಯ ಹೂ
ಘಮಘಮಿಸಿ
ಯಾರೋ ಒಬ್ಬಿಬ್ಬರ ಹೆಸರು 'ಹೆಸರಾಗಿ'
ಹಾಗೇ ಕರಗಿದ ಎಷ್ಟೊಬ್ಬರ ನೆನಪಿಡದ
ಈ ಚರಿತ್ರೆಗಳ
ಉರು ಹೊಡೆಯುತ್ತ ಸುಮ್ಮನಿರಬೇಕ

ಉಹುಃ
ಅದೆಲ್ಲ ಚರಿತ್ರೆಯೇ ಅಲ್ಲ
ಕಣ್ಣುಗಳು ನೋಡುವಷ್ಟು ನೋಡಿ
ಮುಚ್ಚಿದ ಮೇಲಿನ ಕತ್ತಲಲ್ಲಿ
ಉಳಿಯುವ ಕೊನೇಯ ಚಿತ್ರ ಚರಿತ್ರೆ ಹೇಗಾದಿತು
ಚರಿತ್ರೆ ಎಂದರೆ ಗಾಯವಲ್ಲ...
ಗಾಯದ ಮೊದಲಿನ ಹೋರಾಟ
ಹೋರಾಟದ ಮೊದಲಿನ ಹಪಹಪಿ
ಹಪಹಪಿಗೂ ಮೊದಲಿನ ಉದಾಸೀನ
ಉದಾಸೀನಕ್ಕೂ ಮೊದಲಿನ ಮುಗ್ಧತೆ
ಚರಿತ್ರೆ ಅಂದರೆ ಗಾಯವಲ್ಲ...
ಗಾಯದ ನಂತರದ ನೋವು
ನೋವಿಗೂ ನಂತರದ ನವೆ
ನವೆಯೂ ಮುಗಿದ ಕಲೆ
ಕಲೆಯ ಜತೆಗಿನ ನಿರಂತರ ಯಾತನೆ
ಚರಿತ್ರೆ